# ಕೆ.ಸಿ.ಡಿ. ಸಮಾಚಾರ

ಶಿಕ್ಷಣ-ಸಂಸ್ಕೃತಿ-ಸಮಾಜ ನಮ್ಮ ಧ್ಯೇಯ, ನಿಷ್ಠೆ

ಬದುಕಿನ ಹಾದಿಯಲ್ಲಿ ಬರವಣಿಗೆಯ ತೋರಣ

KCD JOURNALISM CLUB DHARWAD

ಕರ್ನಾಟಕ ಮಹಾವಿದ್ಯಾಲಯ ಧಾರವಾಡ 100 Years Centenary Celebration 2017-18 KARNATAK COLLEGE DHARWAD

ಕರ್ನಾಟಕ ಕಾಲೇಜು ಧಾರವಾಡ. ಬಿ.ಎ. ಪತ್ರಿಕೋದ್ಯಮ ವಿದ್ಯಾರ್ಥಿಗಳ ವಾರ ಪತ್ರಿಕೆ. ಸಂಚಿಕೆ:12 ಸಂಪುಟ:3 ಪುಟ:2

@KACD100 @Ksamachar Readers can view at Kcd2017.blogspot.in


## ಬೆಳಕು

ಯಶಸ್ಸಿನ ಸಂಭ್ರಮಾಚರಣೆ ವೇಳೆ ಬೆಂಬಲಿಗರನ್ನು ಮುಂದಿರಿಸಿ, ನೀವು ಹಿಂದೆ ನಿಂತು ಖುಷಿಪಡಿ. ಅಪಾಯ ಎದುರಾದಾಗ ನೀವೇ ಮುಂದೆ ನಿಂತು ಹೋರಾಡಿ. ಅದೇ ನಾಯಕತ್ವದ ಗುಣ.

–ನೆಲ್ಸನ್ ಮಂಡೇಲಾ

## Unbelievable facts.

**East or West, India is the best**

India leads the world with the most murders (32,719) per year, with Russia taking second at 28,904 murders per year.

To avoid polluting the elements (fire, earth, water, air), followers of Zoroastrianism in India don't bury their dead, but instead leave bodies in buildings called "Towers of Silence" for the vultures to pick clean. After the bones dry, they are swept into a central well.

Karmanasa River in India is considered to be a cursed river and it is believed that touching its water would ruin one's plans. There's hardly any development along this river. People around this river just eat dry fruits because cooking food would require water!

Two major religions, Buddhism and Jainism, were established in India.

Chail in Himachal Pradesh is the highest cricket pitch in the world. It is situated at an elevation of 2444 meters (above the sea level).) The India-Pakistan World Cup semi-final match in Mohali drew 150 million viewers worldwide. Sachin Tendulkar. (Okay, you knew this!)

The first Granite Temple of the world, the Brihadeswara Temple is situated in Tamil Nadu. It was built during the 11th century, in only five years.

The state of Meghalaya is the wettest inhabited place of earth.

_continues

# ಸಾಧಿಸಲು ಗುರು ಮತ್ತು ಗುರಿ ಮುಖ್ಯ: ಡಾ.ಮಹೇಶ ಜೋಶಿ

ಹಿಂದೆ ಒಬ್ಬ ಗುರು ಮತ್ತು ಮುಂದೆ ಒಂದು ಗುರಿ ಇದ್ದಾಗ ಮಾತ್ರ ಏನನ್ನಾದರೂ, ಸಾಧನೆ ಮಾಡಲು ಸಾಧ್ಯ ಎಂದು ನವದೆಹಲಿ ದೂರದರ್ಶನದ ದಕ್ಷಿಣ ವಲಯದ ಹೆಚ್ಚುವರಿ ಮಹಾನಿರ್ದೇಶಕ ನಾಡೋಜ ಡಾ. ಮಹೇಶ ಜೋಶಿ ಅಭಿಪ್ರಾಯಪಟ್ಟರು. ಅವರು ನಗರದ ಕನಾಟಕ ಕಲಾ ಮಹಾವಿದ್ಯಾಲಯದ ಜಿಮಖಾನ ವತಿಯಿಂದ ಸೃಜನಾ ರಂಗಮಂದಿರದಲ್ಲಿ ಆಯೋಜಿಸಿದ ಪತ್ರಿಭಾ ಪುರಸ್ಕಾರ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದರು.

ಜ್ಞಾನ ಪ್ರತಿಯೊಬ್ಬರಲ್ಲಿ ದೈವದತ್ತವಾಗಿ ಬಂದಿದ್ದು, ಪ್ರತಿಯೊಬ್ಬರೂ ಒಂದಿಲ್ಲೊಂದು ಪ್ರತಿಭೆಯನ್ನು ಹೊಂದಿರುತ್ತಾರೆ. ಆದ್ದ–ರಿಂದ ನಮ್ಮಲ್ಲಿರುವ ಪ್ರತಿಭೆಯನ್ನು ಹೊರತೆಗೆದಾಗ ಅದು ಸಾಧನೆಗೆ ಹೊಸ ಸಾಧನವಾಗಿ ಹೊರಹೊಮ್ಮುತ್ತದೆ ಎಂದ ಅವರು ಆತ್ಮ ವಿಶ್ವಾಸದಿಂದ ಮುನ್ನುಗ್ಗಿದಾಗ ಮಾತ್ರ ಯಶಸ್ಸನ್ನು ಸಾಧಿಸಲು ಒಂದು ಪ್ರೇರಣೆ ಸಿಗುತ್ತದೆ. ಆದ್ದರಿಂದ ಪ್ರತಿಯೊಬ್ಬ ಸಾಧಕನಿಗೆ ಪ್ರಾರಂಭದಲ್ಲಿ ಸಮಸ್ಯೆ ಮತ್ತು ಟೀಕೆಗಳು ಬರುತ್ತವೆ ಅವುಗಳನ್ನು ಮೆಟ್ಟಿನಿಂತಾಗ ಮಾತ್ರ ನಾವು ಕೀರ್ತಿ ಶಿಖರವನ್ನು ಏರಲು ಸಾಧ್ಯ ಎಂದರು. ಸೌಲಭ್ಯಗಳನ್ನು ಪಡೆದು ಸಾಧಿಸುವದಕ್ಕಿಂತ, ಯಾವದೇ ಸೌಲಭ್ಯಗಳು ಇಲ್ಲದೇ ಯಶಸ್ಸನ್ನು ಪಡೆಯುವುದು ಅದು ಒಂದು ನಿಜವಾದ ಸಾಧನೆಯಾಗಿದೆ. ಹಾಗಾಗಿ




ನವದೆಹಲಿ ದೂರದರ್ಶನದ ದಕ್ಷಿಣ ವಲಯದ ಹೆಚ್ಚುವರಿ ಮಹಾನಿರ್ದೇಶಕ ನಾಡೋಜ ಡಾ. ಮಹೇಶ ಜೋಶಿ ಅವರು ಕರ್ನಾಟಕ ಕಾಲೇಜಿನಲ್ಲಿ ಜಿಮಖಾನ ಆಯೋಜಿಸಿದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಿರುವದು. ಚಿತ್ರದಲ್ಲಿ ಡಾ ಅರುಣಾ ಹಳ್ಳಿಕೇರಿ, ಡಾ ರಾಜೇಶ್ವರಿ ಮಹೇಶ್ವರಯ್ಯ, ಡಾ ಎಸ್ ಎಸ್ ಕಟ್ಟಿಮನಿ, ಕಾರ್ಯದರ್ಶಿ ದತ್ತನಿರಂಜನ ಇದ್ದಾರೆ.

ಇಂದು ಪ್ರತಿಯೊಬ್ಬ ವಿದ್ಯಾರ್ಥಿಯು ಗು–ರಿಮುಟ್ಟುವಲ್ಲಿ ಛಲವನ್ನು ಹೊಂದಿದಾಗ ಮಾತ್ರ ಸಾಧಿಸಲು ಒಂದು ಸ್ವಯಂ ವಿಶ್ವಾಸ ಹೆಚ್ಚುಸುತ್ತದೆ ಎಂದ ಅವರು ದೂರದರ್ಶನ ಕೇಂದ್ರದಿಂದ ಪ್ರಸಾರವಾಗುವ ಜನಪ್ರಿಯ ಕಾರ್ಯಕ್ರಮವಾದ ಮಧುರ ಮಧುರ ಮಂಜುಳಗಾನ ಕಾರ್ಯಕ್ರಮವನ್ನು ಕರ್ನಾಟಕ ಕಲಾ ಮಹಾವಿದ್ಯಾಲಯದ ಆವರಣದಲ್ಲಿ ಆಯೋಜಿಸಲಾಗುತ್ತದೆ ಎಂದು ಈ ಸಂದರ್ಭದಲ್ಲಿ ಘೋಷಿಸಿದರು.

ಕರ್ನಾಟಕ ಕಲಾ ಮಹಾವಿದ್ಯಾಲಯದ ಉಪ ಪ್ರಾಚಾರ್ಯರಾದ ಡಾ.ರಾಜೇಶ್ವರಿ ಮಹೇಶ್ವರಯ್ಯ ಮಾತನಾಡಿ ಕರ್ನಾಟಕ ಕಾಲೇಜಿನಲ್ಲಿರುವ 33 ವೇದಿಕೆಗಳು ವೇದಿಕೆಗಳು ವಿದ್ಯಾರ್ಥಿಗಳ ಸರ್ವೊತೋಮುಖ ಬೆಳವಣಿಗೆಗೆ ಸಹಾಯಕವಾಗಿವೆ ಎಂದು ಕಾಲೇಜಿನ ಸಾಧನೆಯ ಪಕ್ಷಿನೋಟವನ್ನು ಪರಿಚಯಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಚಾರ್ಯರಾದ ಡಾ.ಎಸ್.ಎಸ್ ಕಟ್ಟಿಮನಿ ಮಾತನಾಡಿ ಸಂಶೋಧನಾ ಕ್ಷೇತ್ರಕ್ಕೆ ಕರ್ನಾಟಕ ಕಲಾ ಮಹಾವಿದ್ಯಾಲಯದ ಶಿಕ್ಷಕ ವೃಂದದ ಕೊಡುಗೆ ಮಹತ್ವದ್ದಾಗಿದೆ ಎಂದ ಅವರು ಜೀವನದಲ್ಲಿ ಏನೇ ಆಗಲಿ ಮುನ್ನುಗ್ಗಿ, ಕಠಿಣ ಪರಿಶ್ರಮದಿಂದ ಯಶಸ್ಸನ್ನು ಸಾಧಿಸಿದಾಗ ಮಾತ್ರ ಆ ಸಾಧನೆಗೆ ನಿಜನವಾದ ಒಂದು ಬೆಲೆ ಇರತ್ತದೆ ಎಂದರು.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಪದವಿ ಜತೆಗೆ ಕೌಶಲ್ಯಗಳನ್ನು ಬೆಳಸಿಕೊಂಡಾಗ ಮಾತ್ರ ಮುಂದೆ ಭವಿಷ್ಯವಿದೆ ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ 2016–17ನೇ ಸಾಲಿನ ಶೈಕ್ಷಣಿಕ ವರ್ಷದ ರ್‍ಯಾಂಕ್ ವಿಜೇತರ, ಕ್ರೀಡಾಪಟುಗಳ ಹಾಗೂ ವಿಶೇಷ ಸಾಧನೆಗೈದ ವಿದ್ಯಾರ್ಥಿಗಳಿಗೆ ಸ್ಮರಣಿಕೆ ಮತ್ತು ಪ್ರಮಾಣಪತ್ರವನ್ನು ನೀಡಿ ಸನ್ಮಾನಿಸಲಾಯಿತು. ಸಮಾರಂಭದಲ್ಲಿ ಡಾ. ವಿ. ಶಾರದ ಅತಿಥಿಗಳನ್ನು ಸ್ವಾಗತಿಸಿದರು, ಡಾ.ಅರುಣಾ ಹಳ್ಳಿಕೇರಿ ಅತಿಥಿಗಳನ್ನು ಪರಿಚಯಿಸದರು. ಅಭಿಷೇಕ ಚೌಕಿಮಠ ಮತ್ತು ನಿವೇದತಾ.ಬಿ ಕಾರ್ಯಕ್ರಮವನ್ನು ನಿರೂಪಿಸಿದರು. ಕರ್ನಾಟಕ ಕಾಲೇಜಿನ ವಿದ್ಯಾರ್ಥಿ ಕಾರ್ಯದರ್ಶಿ ದತ್ತನಿರಂಜನ ವಂದಿಸಿದರು.

ಡಾ.ಎಮ್.ಕೆ.ವ್ಹಿ.ಲಮಾಣಿ, ಡಾ.ವಾಯ್ ಎಸ್ ರಾವುತ್, ಡಾ. ಬಿಎಸ್ ಭಜಂತ್ರಿ, ಡಾ.ವಿ ಎಚ್ ತಳವಾರ, ಡಾ.ಸ್ಟೇಲ್ಲಾ ಸ್ಟಿವನ್, ಡಾ ಎ.ಸಿ.ಕುರಹಟ್ಟಿ, ಪ್ರೊ. ಚಾಕಲಬ್ಬಿ, ಡಾ. ಪ್ರಭಾಕರ ಕಾಂಬಳೆ, ಡಾ. ಸುಣಗಾರ, ಡಾ.ಸಿರಿಗೇರಿ ಪ್ರೊ.ಚನ್ನಬಸಪ್ಪ ಐನ್ನಳ್ಳಿ, ಪ್ರೊ. ಪರ್ವತಾಲು, ಪ್ರೋ. ರವೀಂದ್ರ ಯಾದವ, ವಿಶ್ವನಾಥ ತಳವಾರ ಹಾಗೂ ಕಾಲೇಜಿನ ಕಲೆ,ವಾಣಿಜ್ಯ, ವ್ಯವಹಾರ ಮತ್ತು ವಿಜ್ಞಾನದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ಹಾಜರಿದ್ದರು.

–ನಿತಿನ್
(2ನೇ ಸೆಮಿಸ್ಟರ್)

# ದಕ್ಷ ಆಡಳಿತಗಾರ ಇದ್ದಾಗ ಮಾತ್ರ ಸಂಸ್ಥೆ ಅಭಿವೃದ್ಧಿ ಸಾಧಿಸಲು ಸಾಧ್ಯ: ರಾಜೇಶ್ವರಿ ಮಹೇಶ್ವರಯ್ಯ

ಯಾವದೇ ಒಂದು ಸಂಸ್ಥೆ ಬೆಳೆಯಬೇಕಾದರೆ ಅದಕ್ಕೆ ಒಬ್ಬ ಮುಖ್ಯ ದಕ್ಷ ಆಡಳಿತಗಾರ ಇದ್ದಾಗ ಮಾತ್ರ ಅದು ಅಭಿವೃದ್ಧಿ ಸಾಧಿಸಲು ಸಾಧ್ಯ ಎಂದು ಕರ್ನಾಟಕ ಕಲಾ ಮಹಾವಿದ್ಯಾಲಯದ




ಚಿತ್ರದಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಉಪ ಪ್ರಾಚಾರ್ಯರಾದ ರಾಜೇಶ್ವರಿ ಮಹೇಶ್ವರಯ್ಯ ಮಾತನಾಡುತ್ತಿರುವದು ಕಚೇರಿಯ ಅಧಿಕ್ಷಕರಾದ ಡಾ ಸುಭಾಶ ಮಡಿಗಾರ, ಪ್ರಾಚಾರ್ಯರಾದ ಡಾ ಎಸ್ ಎಸ್ ಕಟ್ಟಿಮನಿ, ಶ್ರೀಮತಿ ಸ್ಮೀತಾ ಎಸ್ ಕಟ್ಟಿಮನಿ ಮತ್ತು ಕರ್ನಾಟಕ ಕಾಲೇಜಿನ ಸ್ಥಾನಿಕ ವೈದ್ಯಾಧಿಕಾರಿಗಳಾದ ಡಾ. ಎಲ್ಲೇದಹಳ್ಳಿ ಇದ್ದಾರೆ.

ಉಪ ಪ್ರಾಚಾರ್ಯರಾದ ಡಾ. ರಾಜೇಶ್ವರಿ ಮಹೇಶ್ವರಯ್ಯ ಅಭಿಪ್ರಾಯಪಟ್ಟರು. ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದ ಫ್ಯಾರೆನ್ ಸಭಾಂಗಣದಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಶಿಕ್ಷಕೇತರ ನೌಕರರ ಒಕ್ಕೂಟವು ನಿವೃತ್ತಿ ಹೊಂದುತ್ತಿರುವ ಕಾಲೇಜಿನ ಪ್ರಾಚಾರ್ಯರಾದ ಡಾ.ಎಸ್.ಎಸ್. ಕಟ್ಟಿಮನಿ ಅವರಿಗೆ ಏರ್ಪಡಿಸಿದ್ದ ಬಿಳ್ಕೊಡುಗೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಇಂದು ನಾವೆಲ್ಲರೂ ಒಂದು ಸಮಾಜದಲ್ಲಿ ಬದಕುತ್ತಿದ್ದು, ಆ ಸಮಾಜದಲ್ಲಿ ನಾವು ಯಾವ ರೀತಿಯಾಗಿ ಬದುಕನ್ನು ಸಾಗಿಸಿದ್ದೇವೆ ಎನ್ನುವುದು ನಾವು ಮಾಡಿರು ಒಳ್ಳೆಯ ಕೆಲಸಗಳೇ ನಮ್ಮ ವ್ಯಕ್ತಿತ್ವವನ್ನು ಸಾರಿ ಹೇಳುತ್ತವೆ ಎಂದು ಪ್ರಾಚಾರ್ಯರಾದ ಡಾ ಎಸ್ ಎಸ್ ಕಟ್ಟಿಮನಿ ಅವರನ್ನು ಉಲ್ಲೇಖಿಸಿ, ಒಂದು ಶೈಕ್ಷಣಿಕ ಸಂಸ್ಥೆಯಲ್ಲಿ ವಿದ್ಯಾರ್ಥಿಗಳ, ಶಿಕ್ಷಕರ ಮತ್ತು ಆಡಳಿತ ಸಿಬ್ಬಂದಿಯ ಮೆಚ್ಚುಗೆಯನ್ನು ಡಾ ಕಟ್ಟಿಮನಿ ಅವರು ಪಡೆದು ಕೊಂಡಿದ್ದು, ಕಾಲೇಜಿನ ಅಭಿವೃದ್ದಿಗಾಗಿ ಅವರ ಸಲಹೆ ಸೂಚನೆಗಳು ನೀಡುತ್ತಿರಲಿ ಎಂದರು.

ಕರ್ನಾಟಕ ಕಾಲೇಜಿನ ಇಂಗ್ಲೀಷ್ ವಿಭಾಗದ ಪ್ರಾಧ್ಯಾಪಕರಾದ ಡಾ ಮುಕುಂದ ಲಮಾಣಿ ಮಾತನಾಡಿ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಶಿಕ್ಷಕೇತರ ನೌಕರರ ಬಂಧುಗಳು ಡಾ ಕಟ್ಟಿಮನಿ ಅವರಿಗೆ ಬಹಳ ಅನ್ಯೊನ್ಯ ಸಂಬಂಧವನ್ನು ಹೊಂದಿದ್ದು, ಡಾ ಕಟ್ಟಿಮನಿ ಅವರ ಸರಳತೆ, ದಕ್ಷತೆ ಮತ್ತು ಭಾವನಾಜೀವಿಯಾಗಿದ್ದು ಅವರಲ್ಲಿರು ಈ ಎಲ್ಲ ಗುಣಗಳು ಅವರಿಗೆ ಇಷ್ಟೊಂದು ಪ್ರೀತಿಯು ದೂರಕುತ್ತಿರುವದು ಮತ್ತು ಅವರು ಎಲ್ಲರ ಜತೆ ಉತ್ತಮ ಒಡನಾಟಕ್ಕೆ ಒಂದು ಉದಾಹರಣೆಯಾಗಿದೆ ಎಂದರು.

ಇದೆ ಸಂದರ್ಭದಲ್ಲಿ ಕಾಲೇಜಿನ ಶಿಕ್ಷಕೇತರರ ನೌಕರರು ಡಾ ಎಸ್ ಎಸ್ ಕಟ್ಟಿಮನಿ ಮತ್ತು ಅವರ ಪತ್ನಿಯನ್ನು ಸನ್ಮಾನಿಸಿಲಾಯಿತು. ಕಾರ್ಯಕ್ರಮದಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಕಚೇರಿಯ ಸಿಬ್ಬಂದಿ ವಿಜಯ ತಿಬೇಲಿ ಶ್ರೀಮತಿ ಶ್ರೀಮತಿ ರೇಖಾ, ಚವ್ಹಾಣ, ವಿರೇಶ, ರಾಜು ಶೇಖರ ಹೂಸಮನಿ, ಬಸಯ್ಯ ಹಾಗೂ ಕಲಾ, ಬಿಬಿಎ ಮತ್ತು ವಿ.ಕೃ ಗೋಕಾಕ ಗ್ರಂಥಾಲಯ ಮತ್ತು ವಿವಿಧ ವಿಭಾಗದ ನೌಕರರು ಭಾಗವಹಿಸಿದ್ದರು. ಕರ್ನಾಟಕ ಕಾಲೇಜಿನ ಕಚೇರಿಯ ಗುಮಾಸ್ತರಾದ ಶ್ರೀಮತಿ ಹಂಪಮ್ಮ ಅವರು ಅತಿಥಿಗಳನ್ನು ಸ್ವಾಗತಿಸಿ ನಿರೂಪಿಸಿದರು. ಡಾ ಎಂ.ಬಿ. ದಳಪತಿ ವಂದಿಸಿದರು.

–ಚೈತ್ರ
(2ನೇ ಸೆಮಿಸ್ಟರ್)

# "ಪತ್ರಿಕೋದ್ಯಮ ಕ್ಷೇತ್ರ ಇಂದು ಯುವ ಸಮುದಾಯಕ್ಕೆ ಆಕರ್ಷಕ ಮಾಧ್ಯಮವಾಗಿದೆ"




**ಕಾರ್ಯಕ್ರಮದಲ್ಲಿ ಕರ್ನಾಟಕ ಕಾಲೇಜಿನ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮದ ವಿಭಾಗದ ಸಂವಹನ ಕ್ಲಬ್ ವತಿಯಿಂದ ನಿವೃತ್ತಿ ಹೊಂದಲಿರುವ ಕೆಸಿಡಿ ಪ್ರಾಚಾರ್ಯರಾದ ಡಾ ಎಸ್ ಎಸ್ ಕಟ್ಟಿಮನಿ ಅವರನ್ನು ಸನ್ಮಾನಿಸಲಾಯಿತು. ಚಿತ್ರದಲ್ಲಿ ವಾರ್ತಾ ಇಲಾಖೆಯ ಹಿರಿಯ ನಿರ್ದೇಶಕರಾದ ಮಂಜುನಾಥ ಡೊಳ್ಳಿನ ಮತ್ತು ಉಪಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ ಪತ್ರಿಕೋದ್ಯಮ ವಿಭಾಗದ ಉಪನ್ಯಾಸಕ ಡಾ. ಪ್ರಭಾಕರ ಕಾಂಬಳೆ ಅವರು ಡಾ. ಎಸ್ ಎಸ್ ಕಟ್ಟಿಮನಿ ಅವರನ್ನು ಸನ್ಮಾನಿಸುತ್ತಿರುವದು.**

ಪತ್ರಿಕೋದ್ಯಮ ಕ್ಷೇತ್ರ ಇಂದು ಅಗಾಧವಾಗಿ ಬೆಳೆಯುತ್ತಿರುವ ಯುವ ಸಮುದಾಯಕ್ಕೆ ಆಕರ್ಷಕ ಮಾಧ್ಯಮವಾಗಿದೆ ಎಂದು ಧಾರವಾಡ ಜಿಲ್ಲಾ ಸಾರ್ವಜನಿಕ ಸಂಪರ್ಕ ಮತ್ತು ವಾರ್ತಾ ಇಲಾಖೆಯ ಹಿರಿಯ ನಿರ್ದೇಶಕರಾದ ಮಂಜುನಾಥ ಡೊಳ್ಳಿನ ಅಭಿಪ್ರಾಯಪಟ್ಟರು. ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ಸಂವಹನ ಕ್ಲಬ್‌ನ ವಾರ್ಷಿಕ ಚಟುಟಿಕೆಗಳ ಸಮಾರೋಪ ಸಮಾರಂಭ ಮತ್ತು ಬಿ.ಎ ಅಂತಿಮ ಪತ್ರಿಕೋದ್ಯಮ ವಿದ್ಯಾರ್ಥಿಗಳ ಬೀಳ್ಕೊಡಿಗೆ ಸಮಾರಂಭದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ಇಂದು ಸಮೂಹ ಮಾಧ್ಯಮಗಳು ತೀವ್ರವಾಗಿ ಬೆಳೆಯುತ್ತಿದ್ದು, ಯುವಕ ಮತ್ತು ಯುವತಿಯರಿಗೆ ಒಂದು ರಂಜಿತವಾದ ಆಕರ್ಷಕ ಮಾಧ್ಯಮವಾಗಿ ಸೆಳೆಯುತ್ತಿದೆ. ಇಂದು ವಿದ್ಯುನ್ಮಾನ ಮತ್ತು ಪತ್ರಿಕೆಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಇಂದಿನ ಯುವ ಸಮುದಾಯವು ಈ ಕ್ಷೇತ್ರಕ್ಕೆ ಬರುವ ಸಂಖ್ಯೆ ಹೆಚ್ಚಾಗಿದೆ ಎಂದ ಅವರು ಇಂದಿನ ವಿದ್ಯಾರ್ಥಿಗಳು ಹೆಚ್ಚು ಪ್ರಸಕ್ತ ವಿದ್ಯಮಾನಗಳ ಜೊತೆಗೆ ಸಾಹಿತ್ಯದತ್ತ ಒಲವು ಬೆಳೆಸಿಕೊಳ್ಳುವುದರ ಜತೆಗೆ ಭಾಷೆಯ ಮೇಲೆ ಪ್ರಭುತ್ವಹೊಂದಬೇಕು ಎಂದರು.

ಇಂದು ಮಾಧ್ಯಮಕ್ಕೆ ಬರುವವರು ತಂತ್ರಜ್ಞಾನ ಮತ್ತು ಸಾಹಿತ್ಯದ ಜೊತೆಗೆ ಬದ್ಧತೆ, ಪ್ರಾಮಾಣಿಕತೆ, ಧೈರ್ಯ ಹಾಗೂ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕಾದ ಅವಶ್ಯಕತೆ ಇದೆ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ಇಂದಿನ ಅನೇಕ ವಿದ್ಯುನ್ಮಾನ ಮಾಧ್ಯಮಗಳ ವರ್ಣರಂಜಿತ ಸುದ್ದಿಗಳಿಗೆ ಹೆಚ್ಚು ಪ್ರಾಶಸ್ತ್ಯ ನೀಡುತ್ತಿದ್ದು ಸಮಾಜ ಪರ ಸುದ್ದಿಗಳು ಕಡಿಮೆ ಯಾಗುತ್ತಿವೆ ಎಂದು ಕಳವಳ ವ್ಯಕ್ತಪಡಿಸಿದರು. ಯಾವದೇ ಮಾಧ್ಯಮಕ್ಕೆ ಇಂದು ಜಾಹೀರಾತು ಒಂದು ಪ್ರಮುಖವಾದ ಆದಾಯದ ಮೂಲವಾಗಿದ್ದು, ಇಂದು ಹೆಚ್ಚಿನ ಮಾಧ್ಯಮಗಳು ಬಂಡವಾಳ ಶಾಹಿವ್ಯವಸ್ಥಯಲ್ಲಿ ನಿಯಂತ್ರಣದಲ್ಲಿ ಇವೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಉಪಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ ಮಾತನಾಡಿ ಪತ್ರಕೋದ್ಯಮ ವಿದ್ಯಾರ್ಥಿಗಳು ಹೆಚ್ಚು ಹೆಚ್ಚಾಗಿ ಭಾಷೆ ಮತ್ತು ಸಾಹಿತ್ಯ ಅಧ್ಯಯನದಿಂದ ಭಾಷೆಯ ಹಿಡಿತದ ಮೇಲೆ ಪ್ರಭುತ್ವ ಪಡೆದುಕೊಳ್ಳಬೇಕು ಎಂದರು.

ಪತ್ರಿಕೋದ್ಯಮದ ವಿಭಾಗದ ಉಪನ್ಯಾಸಕರಾದ ಡಾ ಪ್ರಭಾಕರ ಕಾಂಬಳೆ ಮಾತನಾಡಿ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ 2011 ರಿಂದ ಈ ವಿಭಾಗವು ಪ್ರಾರಂಭಗೊಂಡಿದ್ದು ಇಲ್ಲಿಯ ವರೆಗೆ ಮೂರು ಬ್ಯಾಚುಗಳು ಹೊರಹೊಮ್ಮಿದ್ದು, ಇದು ನಾಲ್ಕನೇಯ ಬ್ಯಾಚು ಆಗಿದ್ದು. ಈ ವಿಭಾಗದಿಂದ ಕೆಸಿಡಿ ಸಮಾಚಾರ ಎಂಬ ಪತ್ರಿಕೆಯು ಕಾಲೇಜಿನಲ್ಲಿ ನಡೆಯುವ ಎಲ್ಲ ಸಮಾರಂಭಗಳ ಸುದ್ದಿ, ಲೇಖನಗಳನ್ನು ಪ್ರಕಟಿಸುವುದರ ಜೊತೆಗೆ ವಿಭಾಗದ ವತಿಯಿಂದ ಪತ್ರಿಕೋದ್ಯಮದ ಬ್ಲಾಗ್, ಫೆಸಬುಕ್ ಪೇಜ್, ಟ್ವಿಟ್ಟರ್ ಖಾತೆಯನ್ನು ಹೊಂದಿ ಇಂದು ತಂತ್ರಜ್ಞಾನವನ್ನು ಮೈಗೂಡಿಸಿಕೊಂಡಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಚಾರ್ಯರಾದ ಡಾ ಎಸ್ ಎಸ್ ಕಟ್ಟಿಮನಿ ಮಾತನಾಡಿ ಇಂದು ಮಾಧ್ಯಮದ ಪ್ರಖರತೆ ಹೆಚ್ಚು ಇದ್ದು ಅನೇಕ ಸಂದರ್ಭದಲ್ಲಿ ಮಾಧ್ಯಮಗಳು ಸುದ್ದಿ ಬಿತ್ತರಿಸುವಲ್ಲಿ ಎಡವುತ್ತಿವೆ ಮತ್ತು ಸರಿಯಾದ ರೀತಿಯಲ್ಲಿ ಭಾಷೆಯ ಬಳಕೆ ಸರಿಯಾಗಿ ಆಗುತ್ತಿಲ್ಲ ಎಂದು ವಿಷಾದಿಸಿದ ಅವರು ಪತ್ರಿಕೋದ್ಯಮ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಸಮಾರಂಭದಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾ ಡಾ ಎಸ್ ಎಸ್ ಕಟ್ಟಿಮನಿ ಮುಂದಿನ ಮೇ 30 ರಂದು ನಿವೃತ್ತಿ ಹೊಂದುತ್ತಿದ್ದು, ಅವರಿಗೆ ಸಮೂಹ ಸಂವಹನ ಮತ್ತು ಪತ್ರಿಕೊದ್ಯಮದ ವಿಭಾಗದ ಸಂವಹನ ಕ್ಲಬ್ ವತಿಯಿಂದ ಸನ್ಮಾನಿಸಲಾಯಿತು.

ಸಮಾರಂಭದಲ್ಲಿ ಪತ್ರಿಕೋದ್ಯಮ ವಿಭಾಗದ ಬಿ.ಎ. ಅಂತಿಮ ವಿದ್ಯಾರ್ಥಿಗಳಾದ ಲಕ್ಷ್ಮಿ ಮೂರಬ, ಸುನೀಲ ಗದಿಗೇಪ್ಪಗೋಳ, ಮೇಘನಾ, ಮತ್ತು ಅಭಿಷೇಕ ಚೌಕಿಮಠ ವಿಭಾಗದ ಕುರಿತು ಅಭಿಪ್ರಾಯಗಳನ್ನು ಹಂಚಿಕಂಡರು. ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಗುಲಾಬಿ ಹೂ ಮತ್ತು ಪೆನ್ನು ನೀಡುವ ಮೂಲಕ ಅವರಿಗೆ ಶುಭ ಹಾರೈಸಲಾಯಿತು.

ಕಾರ್ಯಕ್ರಮದಲ್ಲಿ ಪೂಜಾ ಕುಲಕರ್ಣಿ ಬೀಳ್ಕೊಡುಗೆ ನುಡಿಗಳನ್ನು ಆಡಿದರು. ರವಿಚಂದ್ರನ ಅತಿಥಿಗಳನ್ನು ಸ್ವಾಗತಿಸಿದರು, ಮಂಜುನಾಥ ಅತಿಥಿಗಳನ್ನು ಪರಿಚಯಿಸಿದರೆ, ಐಶ್ವರ್ಯ ರಾಜಪೂರೋಹಿತ ಸೈದಾಬಿ ಹೂಲಿ ಕಾರ್ಯಕ್ರಮವನ್ನು ನಿರೂಪಿಸಿದರು ಅಂಕಿತಾ ಕುಲಕರ್ಣಿ ವಂದಿಸಿದರು.

_ಅಂಕಿತಾ
(4ನೇ ಸೆಮಿಸ್ಟರ್)

## ಕವಿವಿ ಮತ್ತು ಕೆಸಿಡಿಯ ನಿವೃತ್ತಿ ಹೊಂದಲಿರುವ ಪ್ರಾಧ್ಯಾಪಕರಿಗೆ ಸನ್ಮಾನ




**ಕವಿವಿ ಮತ್ತು ಕೆಸಿಡಿಯ ನಿವೃತ್ತಿ ಹೊಂದಿದ ಮತ್ತು ಹೊಂದಲಿರುವ ಪ್ರಾಧ್ಯಾಪಕರನ್ನು ಸನ್ಮಾನಿಸಿಲಾಯಿತು. ಚಿತ್ರದಲ್ಲಿ ಪ್ರೊ. ಪ್ರಮೋದ ಗಾಯಿ ಮಾತಾನಾಡುತ್ತಿರುವುದು. ಡಾ ರಾಜೇಶ್ವರಿ ಮಹೇಶ್ವರಯ್ಯ, ಪ್ರೊ. ವಿ.ಬಿ.ಅಣ್ಣಿಗೇರಿ, ಡಾ ಹೊನ್ನಪ್ಪ, ಡಾ ಎಸ್ ಅನ್ನಪೂರ್ಣ, ಡಾ ಶಾರದಾ ಇದ್ದಾರೆ.**

ಯಾರು ವಿದ್ಯಾರ್ಥಿಗಳನ್ನು ಅಗಾಧವಾಗಿ ಪ್ರೀತಿಸುತ್ತಾರೋ, ಯಾರು ತಮ್ಮ ಶಿಕ್ಷಕ ವೃತ್ತಿಯನ್ನು ಅಗಾಧವಾಗಿ ಪ್ರೀತಿಸುತ್ತಾರೋ ಮತ್ತು ಯಾರು ತಾವು ಬೋಧಿಸುವ ಸಂಸ್ಥೆಯನ್ನು ಪ್ರೀತಿಸುತ್ತಾರೋ ಅವನೊಬ್ಬ ಒಬ್ಬ ನಿಜವಾದ ಆದರ್ಶ ಶಿಕ್ಷಕ ಎಂದು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಪ್ರಮೋದ ಗಾಯಿ ಅಭಿಪ್ರಾಯಪಟ್ಟರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಎಕನಾಮಿಕ್ಸ್ ಸ್ಟಡಿ ಸರ್ಕಲ್ ವತಿಯಿಂದ ಕರ್ನಾಟಕ ಕಾಲೇಜಿನ ಫ್ಯಾರೇನ್ ಸಭಾಗಂಣದಲ್ಲಿ ಬಿಎ ಅಂತಿಮ ವರ್ಷದ ವಿದ್ಯಾರ್ಥಿಗಳ ಬಿಳ್ಕೊಡುಗೆ ಸಮಾರಂಭ ಮತ್ತು ನಿವೃತ್ತಿ ಹೊಂದುತ್ತಿರುವ ಕೆಸಿಡಿ ಪ್ರಾಚಾರ್ಯ-ರಿಗೆ ಮತ್ತು ನಿವೃತ್ತಿ ಹೊಂದಿದ ಕೆಯುಡಿ ಪ್ರಾಧ್ಯಾಪಕರಿಗೆ ಸನ್ಮಾನಿಸಿ ಮಾತನಾಡುತ್ತಿದ್ದರು.

ವಿದ್ಯಾರ್ಥಿಗಳಾದ ನೀವು ಜೀವನದಲ್ಲಿ ಯಾವದೇ ವೃತ್ತಿಯನ್ನು ಆಯ್ಕೆ ಮಾಡಿಕೂಂಡರು ನೀವು ಮಾದರಿ ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಳ್ಳಿ ಅವರು ನಿಮ್ಮ ಶಿಕ್ಷಕರಾಗಿರಬಹುದು

ಅಥವಾ ಬೇರೆ ಯಾವದೇ ವ್ಯಕ್ತಿ ಆಗಿರಬಹುದು, ಅವರಂತೆ ನೀವು ಜೀವನದಲ್ಲಿ ಏನನ್ನಾದರೂ ಸಾಧಿಸಲು ಪ್ರಯತ್ನಿಸಿ ಎಂದು ಅವರು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ವಿದ್ಯಾರ್ಥಿಗಳಿಗೆ ಇಂದು ಅನೇಕ ಅವಕಾಶಗಳಿಗದ್ದು, ಅವುಗಳನ್ನು ಸರಿಯಾದ ರೀತಿಯಲ್ಲಿ ಸದುಪಯೋಗ ಪಡಿಸಿಕೊಂಡು ಮುನ್ನುಗ್ಗಿದರೆ ಯಶಸ್ಸು ತಾನಾಗಿಯೇ ಬರುತ್ತದೆ ಎಂದರು. ಪ್ರತಿಯೊಬ್ಬ ವಿದ್ಯಾರ್ಥಿಯು ಬದ್ಧತೆ, ಪ್ರಾಮಾಣಿಕತೆ ಮತ್ತು ಘನತೆಯನ್ನು ಮೈಗೂಡಿಸಿಕೊಂಡರೆ ಅವನು ಉನ್ನತ ಸ್ಥಾನಕ್ಕೆ ಬೆಳೆಯುಲು ಸಾಧ್ಯ ಆದ್ದರಿಂದ ಪತ್ರಿಯೊಬ್ಬ ವಿದ್ಯಾರ್ಥಿಯು ಶಿಕ್ಷಕರಿಂದ ಪ್ರಭಾವಿತಗೊಂಡು ಅವರನ್ನು 'ರೋಲ್ ಮಾಡಲ್' ಎಂದು ಗುರುತಿಸಿಕೊಂಡು ಯಶಸ್ಸನ್ನು ಸಾಧಿಸದವರು ನಮ್ಮ ಮಧ್ಯ ಇದ್ದಾರೆ.

ಆದ್ದರಿಂದ ದೇಶಕ್ಕೆ ಮತ್ತು ಕಲಿತ ಸಂಸ್ಥೆಗೆ ಹೆಸರು ತರಲು ಪ್ರಯತ್ನಿಸಿ ಎಂದು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಧಾರವಾಡದ ಸಿ.ಎಮ್.ಡಿ ಆರ್ ಸಂಶೋಧನಾ ಕೇಂದ್ರ ನಿರ್ದೇಶಕರಾದ ವಿನೋದ ಬಿ ಅಣ್ಣಿಗೇರಿ ಮಾತನಾಡಿ ಕರ್ನಾಟಕ ಕಾಲೇಜು ದೇಶದಲ್ಲಿ ಉತ್ತಮ ಘನತೆಯನ್ನು ಹೊಂದಿದ ಐತಿಹಾಸಿಕ ಪರಂಪರೆಯ ಕಾಲೇಜು ಆಗಿರುವುದರಿಂದ ಇಲ್ಲಿ ಕಠಿಣ ಪರಿಶ್ರಮದಿಂದ ಅಧ್ಯಯನ ಮಾಡಿದರೆ ಯಶಸ್ಸು ಖಂಡಿತ ಎಂದರು.

ಕರ್ನಾಟಕ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ನಿವೃತ್ತಿ ಹೊಂದಿದ ಪ್ರಾಧ್ಯಾಪಕರುಗಳಾದ ಪ್ರೊ. ಎಲ್.ಡಿ.ವೈಕುಂಠೆ, ಪ್ರೊ. ಎಚ್.ಎಚ್.ಉಳುವೆಪ್ಪ ಮತ್ತು ಮುಂದಿನ ತಿಂಗಳು ಮೇ 30 ರಂದು ನಿವೃತ್ತಿ ಹೊಂದುತ್ತಿರುವ ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ ಎಸ್.ಎಸ್.ಕಟ್ಟಿಮನಿ ಅವರನ್ನು ಈ ಸಂದರ್ಭದಲ್ಲಿ ಕುಲಪತಿಗಳು ಸನ್ಮಾನಿಸಿದರು. ಪ್ರೊ. ಎಲ್.ಡಿ.ವೈಕುಂಠೆ, ಪ್ರೊ. ಎಚ್.ಎಚ್.ಉಳುವೆಪ್ಪ ಮತ್ತು ಡಾ ಎಸ್.ಎಸ್.ಕಟ್ಟಿಮನಿ ಸನ್ಮಾನವನ್ನು ಸ್ವೀಕರಿಸಿ ತಮ್ಮ ಅನುಭವಗಳನ್ನು ಹಂಚಿಕೊಂಡರು.

ಈ ಸಂದರ್ಭದಲ್ಲಿ ಬಿಎ ಅರ್ಥಶಾಸ್ತ್ರ ಅಂತಿಮ ವರ್ಷದ ವಿದ್ಯಾರ್ಥಿಗಳಾದ ಯಶೊಧಾ ಧುಳನ್ನವರ, ಮತ್ತು ಮಹ್ಮದ್ ನದಾಫ್ ಕಾಲೇಜಿನ ಕುರಿತು ಅನುಭವನಗಳನ್ನು ಹಂಚಿಕೊಂಡರು. ಡಾ ರಾಜೇಶ್ವರಿ ಮಹೇಶ್ವರಯ್ಯ ಡಾ ಶಾರದಾ, ಡಾ ಹೊನ್ನಪ್ಪ ಮಾತನಾಡಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಧ್ಯಪಕ ವೃಂದ ಮತ್ತು ವಿದ್ಯಾರ್ಥಿಗಳು ಹಾಜರಿದ್ದರು. ಡಾ ಎಸ್ ಅನ್ನಪೂರ್ಣ ಅತಿಥಿಗಳನ್ನು ಸ್ವಾಗತಿಸಿದರು. ಕಾರ್ಯಕ್ರಮವನ್ನು ನಿವೇದಿತಾ, ನವೀನ ಎಲ್ ನಿರೂಪಿಸಿದರು. ಅಂಜನಾ ವಂದಿಸಿದರು.

_ಪೂಜಾ
(4ನೇ ಸೆಮಿಸ್ಟರ್)

## "ಹಾಗೇ ಸುಮ್ಮನೆ"



**ಜಡ್ಜ್** : ಈ ಗುಂಡನ ಎರಡೂ ಕಿವಿ ಕಟ್ ಮಾಡಿ.
: ಬ್ಯಾಡಾ ಸ್ವಾಮಿ. ಕಿವಿ ಏನಾರ ಕಟ್ ಮಾಡಿದ್ರ ನಾ ಕುರುಡ ಆಗ್ತೀನಿ.
ಜಡ್ಜ್: ಲೇ ಹುಚ್ಯಾ ಕಿವಿ ಕತ್ತರಿಸಿದ್ರೆ ಕುರುಡ ಹೆಂಗೆ ಆಗ್ತೀಲೇ!
ಗುಂಡ: ಚಷ್ಮಾದ ಕಡ್ಡಿ ಏನ್ ನಿನ್ನ ಕಿವ್ಯಾಗ ಇಡ್ಲಾ!

****************

**ಮಾಸ್ಟರ್** : ರಾಜು ಪಾತ್ರೆ ತೊಳೆಯ ಬೇಕು. ರಾಜು ಪಾತ್ರೆ ತೊಳೆಯಲೇ ಬೇಕು. ಇದರಲ್ಲಿ ಏನು ವ್ಯತ್ಯಾಸ?
ಗುಂಡ: ಸರ್ ಮೊದಲ ಸಾಲಿನಲ್ಲಿ ರಾಜು ಮದುವೆ ಆಗಿರಲಿಲ್ಲ.ಎರಡನೇ ಸಾಲಿನಲ್ಲಿ ಗ್ಯಾರಂಟಿ ಮದುವೆ ಆಗಿ-ರ್ತಾನೆ ಸರ್.
(ಮಾಸ್ಟರ್ ಕೋಮಾಗೆ ಹೋದರು)

ಗೌರವ ಸಂಪಾದಕರು: ಡಾ. ರಾಜೇಶ್ವರಿ ಮಹೇಶ್ವರಯ್ಯ, ಸಂಚಿಕೆ ಸಂಪಾದಕರು: ಡಾ. ಪ್ರಭಾಕರ್ ಕಾಂಬಳೆ, ಡಾ. ರವೀಂದ್ರ ಜಲರೆಡ್ಡಿ, ವಿದ್ಯಾರ್ಥಿ ಸಂಪಾದಕರು: ಸುನೀಲ,ನಿತಿನ್. ಪುಟ ವಿನ್ಯಾಸ: ಶ್ರೀಹರಿ.